





ಪಾರ್ಕ್‌ನಲ್ಲಿ ಲೇಖಕಿ

ವರ್ಣರಂಜಿತ, ವಿಭಿನ್ನ ಅನುಭವಗಳೊಂದಿಗೆ ರೋಮಾಂಚನ ಹುಟ್ಟಿಸಿತು.

ಪ್ರಾಚೀನದಲ್ಲಿ ಸಿಡಿದ ಅಗ್ನಿಪರ್ವತವೊಂದು ಉಂಟು ಮಾಡಿದ ಕುಳಿಯೇ ಇಂದಿಲ್ಲಿ ಬಹುದೊಡ್ಡ ಸರೋವರವಾಗಿ ಪರಿವರ್ತಿತವಾಗಿದೆ. ಈ ನೀಲ ಸರೋವರದ ಅಂಚು ಕೂಡ ನೆಲಕುಡಿಕೆಗಳಿಂದ ಕೂಡಿ ಪಕ್ಕದಲ್ಲಿ ಪ್ರಶಾಂತ, ನೀಲ, ತಣ್ಣಗಿನ ನೀರು ಜುಳುಜುಳು ಎಂದು ಹರಿದು ನಮ್ಮ ನೋಟವನ್ನು ಸೆಳೆಯುತ್ತದೆ. ಆದರೆ ಅದರ ಅಂಚಿನ ಈ ಕುಡಿಕೆ ನೀರು ಕೊತಕೊತ ಕುದಿಯುತ್ತಿರುತ್ತದೆ. ಇಲ್ಲಿ ನದಿಯೊಂದು ಹರಿಯುತ್ತಿದ್ದು, ಅದಕ್ಕೆ ಕಟ್ಟಿರುವ ಸೇತುವೆಯ ಮೇಲೆ ಮುಂದಿನ ತಾಣಕ್ಕೆ ಹೊರಟಾಗ ಎದುರಿಗೇ ಅದ್ಭುತ ಜಲಪಾತವೊಂದು ಇದಿರಾಗುತ್ತದೆ.

ಈ ಜಲಪಾತ ತನ್ನೊಂದಿಗೆ ಮೇಲಿನ ಭೂಭಾಗದ ಕುದಿಕುದಿ ನೀರನ್ನೂ ಹೊತ್ತು ತಂದು, ನದಿಗೆ ಧುಮ್ಮಿಕ್ಕುವಾಗ ಈ ಭಾಗ ಬೆಳ್ಳನೆಯ ಧೂಮದಿಂದ ತುಂಬಿ ಕಾಣುವ ಸೊಬಗು ವರ್ಣನಾತೀತ. ಸೇತುವೆ ಮೇಲೆ ನಿಂತಾಗ ಸ್ವರ್ಗದಲ್ಲಿರುವಂತೆ, ಇನ್ನೇನೂ ಬೇಡವೆನ್ನುವಂತೆ ಮನಸ್ಸು ಭ್ರಮಾಧೀನವಾಗಿಬಿಟ್ಟಿತು.

ಮೇಲೇರಿದಾಗ ವಿಶಾಲ ಬಯಲಿನಂಥ ಜಾಗ. ಇಲ್ಲಿಯೂ ಯಥಾಪ್ರಕಾರ ವಾಕ್‌ವೇನಲ್ಲಿ ಮಾತ್ರ ನಡೆಯಬೇಕು. ಕಣ್ಣು ಹಾಯಿಸಿದಷ್ಟೂ ದೂರ ಬಯಲು ಮತ್ತು ಬಯಲು. ಒಡಲ ತುಂಬ ಆರ್ದ್ರವಾದ ಸಡಿಲ ಮಣ್ಣು. ಕೆಂಪು, ಕೇಸರಿ, ಹಳದಿ, ಹಸಿರು, ನೀಲ ಬಣ್ಣಗಳ ಪಟ್ಟೆಪಟ್ಟೆಯಲ್ಲಿ ಅಸಾಮಾನ್ಯ ರೂಪದಲ್ಲಿ ಕಾಣುವ ಈ ನೆಲದಲ್ಲಿ ಅಲ್ಲಲ್ಲಿ ನೀರು ಉಕ್ಕುತ್ತ, ಕುದಿಯುತ್ತ, ಹಬೆಯಾಡುತ್ತ ಮತ್ತದೇ ಸುರಲೋಕದ ಬೆಡಗನ್ನು ಪ್ರತಿಫಲಿಸುತ್ತದೆ.

ಯೆಲ್ಲೋ ಸ್ಟೋನ್ ಸರೋವರದ ಸುತ್ತಮುತ್ತ ಹೇರಳವಾಗಿ ‘ಮಡ್ ಪಾಟ್ಸ್’ (ನೆಲದಲ್ಲಿ ಮಡಕೆ ಹೂತಿಟ್ಟಂತೆ ಕಾಣುವ ವಿಸ್ಮಯ)ಗಳಿದ್ದು ನೀರು ಕುದಿಯುತ್ತಲೇ ಇರುತ್ತದೆ. ಪುಟ್ಟ ಪುಟ್ಟ ಕೊಳಗಳಲ್ಲಿ ನೀಲಿ, ಹಸಿರು, ತಿಳಿಗೆಂಪಿನ ನೀರು ಸ್ವಚ್ಛವಾಗಿದ್ದೂ ಕುದಿಯುವುದನ್ನು ನೋಡಿದಾಗ ಅಚ್ಚರಿ. ನೆಲದಾಳದಲ್ಲಿ ಹುದುಗಿರುವ ಅಗ್ನಿಪರ್ವತಗಳಿಂದ, ಅಲ್ಲಿಂದ ಬಿಡುಗಡೆಯಾಗುವ ಅನಿಲಗಳಿಂದ, ಸಲ್ಫರ್, ಆರ್ಸೆನಿಕ್, ಐರನ್ ಸಲ್ಫೈಡ್‌ಗಳೆಂಬ ಖನಿಜಗಳಿಂದ, ಅಗ್ನಿಪರ್ವತ ಮತ್ತು ಕಾಳ್ಗಿಚ್ಚುಗಳು ತಂದು ಹರಡಿದ ಬೂದಿಯಿಂದ ನೀರು, ಮಣ್ಣಿನ ಪದರಗಳು ಕಾಮನಬಿಲ್ಲಿನ ಈ